# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಅಂಗವಿಕಲರಿಗಾಗಿ ಸ್ವಯಂ ಉದ್ಯೋಗ ಒದಗಿಸಿಕೊಡುವ ಆಧಾರ ಯೋಜನೆಯಡಿ ಮಂಜೂರು ಮಾಡುವ ಸಾಲ/ಸಹಾಯಧನದ ಮೊತ್ತವನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಮಮಇ:176:ಪಿಹೆಚ್‌ಪಿ:95 ದಿನಾಂಕ: 1-8-95
2. ನಿರ್ದೇಶಕರು, ಅಂಗವಿಕಲರ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಪತ್ರದ ಸಂಖ್ಯೆ:ನಿಅಕ ಇ:7:ಯೋಜನೆ:98-99:633 ದಿನಾಂಕ:3-6-98.
3. ದಿನಾಂಕ: 21-8-98ರಂದು ನಡೆದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಯುಕ್ತ ಸಮಿತಿ ನಡವಳಿ.

## ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ: 1-8-95ರ ಸರ್ಕಾರಿ ಆದೇಶದಲ್ಲಿ, ಅಂಗವಿಕಲರಿಗಾಗಿ ಸ್ವಯಂ ಉದ್ಯೋಗ ಒದಗಿಸಿಕೊಡುವ ಆಧಾರ ಯೋಜನೆ ಅಡಿ ರಾಜ್ಯದಲ್ಲಿರುವ ಅಂಗವಿಕಲರಿಗೆ ಅವರು ವಾಸಿಸುವ ಸ್ಥಳದಲ್ಲಿ ಸಣ್ಣ ಅಂಗಡಿಗಳನ್ನು ಇಟ್ಟುಕೊಳ್ಳುವುದಕ್ಕಾಗಿ ರೂ. 10,000ಗಳನ್ನು ಸಹಾಯಧನ/ಸಾಲವಾಗಿ ಮಂಜೂರು ಮಾಡಲು ಸರ್ಕಾರವು ಅನುಮತಿ ನೀಡಿದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ನಿರ್ದೇಶಕರು, ಅಂಗವಿಕಲರ ಕಲ್ಯಾಣ ಇಲಾಖೆ, ಬೆಂಗಳೂರು ಇವರು ಆಧಾರ ಯೋಜನೆಯನ್ನು 1995ರಲ್ಲಿ ರೂಪಿಸಲಾಗಿದ್ದು ಯೋಜನೆಗಳ ನಿಬಂಧನೆಗಳನ್ವಯ ರೂ.5000ಗಳ ವೆಚ್ಚದಲ್ಲಿ ಪೆಟ್ಟಿಗೆ ಅಂಗಡಿಗಳನ್ನು ನಿರ್ಮಿಸಲು ಸಾಧ್ಯವಾಗುವುದಿಲ್ಲವೆಂದು ಅಂತೆಯೇ ಈಗ ಮಂಜೂರು ಮಾಡಲಾಗುತ್ತಿರುವ ಐದು ಸಾವಿರ ರೂಪಾಯಿಗಳ ಮೊಬಲಗು ಬಂಡವಾಳಕ್ಕಾಗಿ ಸಾಲುವುದಿಲ್ಲ. ಆದ್ದರಿಂದ ಈಗಿರುವ ಮಿತಿಯನ್ನು ಪರಷ್ಕರಿಸಿ, ಪೆಟ್ಟಿಗೆಯನ್ನು ನಿರ್ಮಿಸಲು, ಕನಿಷ್ಠ ಆರು ಸಾವಿರ ರೂಪಾಯಿಗಳನ್ನು ಒದಗಿಸಬೇಕೆಂದು ಪ್ರಸ್ತಾಪಿಸುತ್ತಾ, ಈಗ ಮಂಜೂರು ಮಾಡುತ್ತಿರುವ 10000 (5000+5000) ರೂಪಾಯಿಗಳಿಗೆ ಬದಲಾಗಿ ಇನ್ನು ಮುಂದೆ ಒಟ್ಟು ರೂ. 12000 (ರೂ.6000+6000)ಗಳನ್ನು ಮಂಜೂರು ಮಾಡಲು ಸಹಾಯವಾಗುವಂತೆ ಉಲ್ಲೇಖಿತ ಆದೇಶಕ್ಕಾಗಿ ತಿದ್ದುಪಡಿ ಹೊರಡಿಸಬೇಕೆಂದು ಪ್ರಸ್ತಾಪಿಸಿದ್ದಾರೆ.

ಈ ಪ್ರಸ್ತಾವನೆಯನ್ನು ದಿನಾಂಕ: 21-8-98ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ ಪರಿಶೀಲಿಸಿ, ತೆಗೆದುಕೊಂಡ ತೀರ್ಮಾನ ಈ ರೀತಿ ಇದೆ.

Revision of adhara Scheme of Self Employment for Disabled

"Under this scheme presently Rs. 5000/- for kiosk and Rs. 5000/- as working capital loan is provided to enable the physically handicapped to take up self employment. Director Disabled Welfare has requested for increase in the unit cost of kiosk to about Rs. 6000/- in view of increase in manufacturing costs and meterials. Hence the Director, Disabled Welfare requested for enhancing the present unit cost from Rs. 10000/- (50/50) to Rs. 12000/- at the rate of Rs. 6000/- for kiosk Rs. 6000/- for loan component (repayable at Rs. 200/- pm in 30 instalments). This additional expenditure is proposed to be accomodated within the existing budget provision made for the purpose, by reducing the physical coverage from existing 700 to 600.

ಈ ತೀರ್ಮಾನದಂತೆ, ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಮಮಇ:212:ಪಿಹೆಚ್‌ಪಿ:98**

**ಬೆಂಗಳೂರು, ದಿನಾಂಕ:13-11-98.**

ನಿರ್ದೇಶಕರು, ಅಂಗವಿಕಲರ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸರ್ಕಾರವು, ಅಂಗವಿಕಲರಿಗಾಗಿ ಪುನರ್ವಸತಿ ಯೋಜನೆ ಅಡಿ ಸ್ವಯಂ ಉದ್ಯೋಗ ಕಲ್ಪಿಸಿಕೊಡಲು ಸಹಾಯಕವಾಗುವಂತೆ, ಆಧಾರ ಯೋಜನೆಯಲ್ಲಿ ಈಗ ಮಂಜೂರು ಮಾಡುತ್ತಿರುವ 10000 (ರೂ. 5000+5000) ರೂಪಾಯಿಗಳಿಗೆ ಬದಲಾಗಿ ಇನ್ನು ಮುಂದೆ ಒಟ್ಟು ರೂ. 12000 ರೂಗಳನ್ನು (6000+6000)ಮಂಜೂರು ಮಾಡಲು ಈ ಕೆಳಕಂಡ ಷರತ್ತುಗಳೊಂದಿಗೆ ಅನುಮತಿ ನೀಡಲಾಗಿದೆ.

1. ಬಂಡವಾಳಕ್ಕೆಂದು ಮಂಜೂರು ಮಾಡಲಾಗಿರುವ ರೂ. 6000ಗಳ ಮೊಬಲಗನ್ನು ಈಗಿರುವ ವ್ಯವಸ್ಥೆಯ ಬದಲಾಗಿ ಫಲಾನುಭವಿಗಳು 30 ತಿಂಗಳಿನಲ್ಲಿ, ತಿಂಗಳಿಗೆ 200 ರೂಗಳಂತೆ ಮರುಪಾವತಿ ಮಾಡತಕ್ಕದ್ದು.
2. ಫಲಾನುಭವಿಗಳ ಸಂಖ್ಯೆಯನ್ನು ಈಗಿನ 700 ರಿಂದ 600ಕ್ಕೆ ಮಿತಿಗೊಳಿಸಲಾಗಿದೆ.
3. 1998-99ನೇ ಸಾಲಿನಲ್ಲಿ, ''ಲೆಕ್ಕಶೀರ್ಷಿಕೆ 2235-02-101-0-31 (ಯೋಜನೆ) ಅಡಿಯಲ್ಲಿ ಆಧಾರ ಯೋಜನೆ (ಅಂಗವಿಕಲರಿಗಾಗಿ ಸ್ವಯಂ ಉದ್ಯೋಗಕ್ಕಾಗಿ ಸಹಾಯಧನ ಯೋಜನೆ) ಅಡಿಯಲ್ಲಿ ರೂ. 70 ಲಕ್ಷಗಳ ಆಯವ್ಯಯವನ್ನು ಒದಗಿಸಿದ್ದು, ದರ ಪರಿಷ್ಕರಣದಿಂದಾಗುವ ಹೆಚ್ಚಿನ ವೆಚ್ಚವನ್ನು ಇದೇ ಮೊತ್ತದಲ್ಲಿ ಭರಿಸತಕ್ಕದ್ದು.
4. ಈ ಆದೇಶವನ್ನು ದಿನಾಂಕ: 21-8-98 ರಂದು ನಡೆದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಯುಕ್ತ ಸಮಿತಿಯ ಸಭೆಯಲ್ಲಿ ನೀಡಿರುವ ಅನುಮತಿ ಅನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಹಿ:

(ಗೀತಾ ರಮೇಶ್)

ಸರ್ಕಾರದ ಅಧೀನ ಕಾರ್ಯದರ್ಶಿ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ